# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/175/13-14

ದಿನಾಂಕ :02.08.2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಜಿ.ಲಕ್ಷ್ಮಣ ತಂದೆ ಲೇಟ್ ದೊಡ್ಡಬಸಪ್ಪ,<br>2.ಶ್ರೀಜಿ.ದೊಡ್ಡಗಾದಿಲಿಂಗಪ್ಪತಂದೆ ಲೇಟ್ ದೊಡ್ಡಬಸ ಪ್ಪ,<br>3.ಶ್ರೀ ಸಣ್ಣಲಿಂಗಪ್ಪ ತಂದೆ ಲೇಟ್ ದೊಡ್ಡಬಸಪ್ಪ,<br>4.ಹಂಪಮ್ಮ ಜಿ.ಲಕ್ಷ್ಮಣ ತಂದೆ ಲೇಟ್ ದೊಡ್ಡಬಸಪ್ಪ,<br>5.ಶ್ರೀ ಜಿ.ವೆಂಕೋಬ ತಂದೆ ಲೇಟ್ ಸಣ್ಣಬಸಪ್ಪ,<br>6.ಶ್ರೀ ಜಿ.ಶಂಕ್ರಪ್ಪ ತಂದೆ ಲೇಟ್ ಸಣ್ಣಬಸಪ್ಪ,<br>7. ಶ್ರೀಗಾದಿಲಿಂಗಪ್ಪ ತಂದೆ ಲೇಟ್ ಸಣ್ಣಬಸಪ್ಪ,<br>8.ಶ್ರೀಶಿವಪ್ಪ ತಂದೆ ಲೇಟ್ ಸಣ್ಣಬಸಪ್ಪ,<br>ಅರಳಿಗನೂರು ಗ್ರಾಮ, ಸಿರುಗುಪ್ಪ ತಾಲ್ಲೂಕು<br>**(ಶ್ರೀವೀರೇಶ್.ವೈ. ವಕೀಲರು, ಸಿರುಗುಪ್ಪ)** | (1) ತಹಶೀಲ್ದಾರರು, ಸಿರುಗುಪ್ಪ<br>(2) ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ<br>(3) ಗ್ರಾಮಲೆಕ್ಕಾಧಿಕಾರಿಗಳು, ಅರಳಿಗನೂರು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಅರಳಿಗನೂರು | 240/ಡಿ | 0.30 |
| | | 255/ಎ | 3.05 |
| | | 240/ಡಿ | 0.29 |
| | | 240/ಸಿ | 0.19 |
| | | 240/ಸಿ | 0.19 |
| | | 255/ಬಿ | 1.42 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.82/2011-12,83/11-12,84/11-12,85/11-12,86/11-12,ದಿನಾಂಕ: 22.02.12 ಮತ್ತು 95/11-12 ದಿನಾಂಕ:28.05.2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 19.11.2013, 22.04.2014, 07.04.2015,29.03.2016,02.08.2016, ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಮುಂದಿನ ಪುಟಕ್ಕೆ.....

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಅರಳಿಗನೂರು ಗ್ರಾಮದ ಸ.ನಂ. 240/ಡಿ,255/ಎ,240/ಡಿ,240/ಸಿ,240/ಸಿ,255/ಬಿ, ವಿಸ್ತೀರ್ಣ: 0.30,3.05,0.29,0.19, 0.19,1.42 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಹಕ್ಕು ಬದಲಾವಣೆ ಗೈರು ಮಂಜೂರು ಆದೇಶ ಎಂ.ನಂ.82/ 2011-12, 83/11-12,84/11-12,85/11-12,86/11-12,ದಿನಾಂಕ: 22.02.12 ಮತ್ತು 95/11-12 ದಿನಾಂಕ: 28.05.2012 ರಲ್ಲಿ ಮುದ್ರಾಂಕ ಶುಲ್ಕ ಪಾವತಿಸಿಲ್ಲವೆಂದು ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುವುದನ್ನು ಪ್ರಶ್ನಿಸುತ್ತಾ ಸದರಿ ಗೈರು ಮಂಜೂರು ಆದೇಶವನ್ನು ರದ್ದು ಪಡಿಸಿ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಸದರಿ ಮೇಲ್ಮನವಿಯಲ್ಲಿ ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ,ವಾದಿಗಳು ನೊಂದಾಣಿಯಾಗದ ಪಾಲು ವಿಭಾಗ ಪತ್ರ ಸಲ್ಲಿಸಿದ್ದು, ಮುದ್ರಾಂಕ ಶುಲ್ಕ ಪಾವತಿಸಿರುವುದಿಲ್ಲ. ನೊಂದಣಿ ಅಧಿನಿಯಮ 1908 ರ ಕಲಂ 17 ರನ್ವಯ ಕಡ್ಡಾಯ ನೋಂದಣಿ ಮಾಡಿಸಬೇಕಾಗಿರುತ್ತದೆ. ಅಲ್ಲದೇ ಕರ್ನಾಟಕ ಮುದ್ರಾಂಕ ಅಧಿನಿಯಮ1957 ರಡಿ ಮುದ್ರಾಂಕ ಶುಲ್ಕ ಪಾವತಿಸಬೇಕಾಗಿರುವುದರಿಂದ. ಈ ಕೆಳಕಂಡಂತೆ ಆದೇಶ.

**:: ಆದೇಶ ::**

**ವಾದಿಯ ಮೇಲ್ಮನವಿಯನ್ನು ತಿರಸ್ಕರಿಸಿದೆ,**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ.ಸಿರುಗುಪ್ಪ ತಾಲ್ಲೂಕಿನ ಅರಳಿಗನೂರು ಗ್ರಾಮದ ಸ.ನಂ 240/ಡಿ,255/ಎ,240/ಡಿ,240/ಸಿ,240/ಸಿ,255/ಬಿ, ವಿಸ್ತೀರ್ಣ: 0.30,3.05,0.29,0.19, 0.19,1.42 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರು ನಿಯಮಾನುಸಾರ ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುವುದರಿಂದ .ವಾದಿಯ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 02-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**ಸಹಾಯಕ ಆಯುಕ್ತರು,**

**ಬಳ್ಳಾರಿ**